ಅ) ಮಾಸಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಕರ್ನಾಟಕ ಮುನ್ಸಿಪಾಲ್ಟಿ ಕಾಯ್ದೆ 1964ರ ಕಲಂ 106 ಮತ್ತು 107ರ ಪ್ರಕಾರ ಕರಾಕರಣೆ ಮಾಡಲಾಗುತ್ತದೆ.

ಇ) ನಗರಸಭೆಯ ನಿಯಮಾವಳಿಗಳಲ್ಲಿ ಈ ರೀತಿಯ ಕರ ಪರಿಷ್ಕರಣೆಗೆ ಅವಕಾಶವಿರುವುದಿಲ್ಲ.

## ವಿಜಾಪುರ ನಗರಸಭೆಯಲ್ಲಿ ಶೇ. 18ರ ಅಭಿವೃದ್ಧಿ ಕಾರ್ಯಕ್ರಮಗಳು

1934 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಪೌರಾಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1994-95, 1995-96, 1996-97ರ ಅವಧಿಯಲ್ಲಿ ವಿಜಾಪುರ ನಗರಸಭೆಯು ಪರಿಶಿಷ್ಟ ಜಾತಿ: ಹಾಗೂ ಪರಿಶಿಷ್ಟ ಜನಾಂಗದ ಅಭಿವೃದ್ಧಿಗಾಗಿ ಮಾಡಿರುವ ಕಾರ್ಯಕ್ರಮಗಳು ಯಾವುವು? (ವಿವರ ನೀಡುವುದು)*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ವಿಜಾಪುರ ನಗರಸಭೆಯ ಶೇ.18ರ ಕಾಯ್ದಿರಿಸಿದ ಹಣದಲ್ಲಿ ವರ್ಷವಾರು ಈ ಕೆಳಕಾಣಿಸಿದಂತೆ ಕಾರ್ಯಕ್ರಮ ರೂಪಿಸಿ, ಅವುಗಳನ್ವಯ ಹಣ ಖರ್ಚು ಮಾಡಿದೆ.

| ವರ್ಷ | ಯೋಜನೆಗಳ ಹೆಸರು | ಖರ್ಚು ಮಾಡಿದ ಹಣ |
|---|---|---|
| 1 | 2 | 3 |
| 1994-95 | 1. ಬಾಲವಾಡಿಗಳ ನಿರ್ವಹಣೆ | 1,89,590 |
| | 2. ಪರಿಶಿಷ್ಟ ಜಾತಿ:ಪಂಗಡ ಜನರ ಸ್ಮಶಾನ ನಿರ್ಮಾಣ | 25,000 |
| | 3. ಪರಿಶಿಷ್ಟ ಜಾತಿ:ಪಂಗಡಗಳ ಬಡಾವಣೆಯಲ್ಲಿ ವಿದ್ಯುತ್ ಕಂಬ ಹಾಕುವುದು | 1,52,765 |
| | 4. ಪರಿಶಿಷ್ಟ ಜಾತಿ: ಪಂಗಡಳ ಬಡಾವಣೆಗಳಲ್ಲಿ ಸಮಾಜಮಂದಿರ ನಿರ್ಮಾಣ | 1,27,690 |
| | 5. ಪರಿಶಿಷ್ಟ ಜಾತಿ: ಪಂಗಡಗಳ ಬಡಾವಣೆಗಳಲ್ಲಿಯ ರಸ್ತೆ ಡಾಂಬರೀಕರಣ | 1,12,920 |
| | 6. ವಾರ್ಡ್ ನಂ. 1ರಿಂದ 10ರವರೆಗೆ ಇರುವ ಪರಿಶಿಷ್ಟಜಾತಿ: ಪಂಗಡಗಳ ಜನರ ಬಡಾವಣೆಗಳಲ್ಲಿ ಖಡಿ ರಸ್ತೆ | 2,18,973 |
| | 7. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪಕ್ಕೆ ಕಾಂಪೌಂಡ್ ಗೋಡೆ ಹಾಗೂ ಸೀಲಿಂಗ್ ಕೆಲಸ | 1,86,906 |

| 1 | 2 | 3 |
|---|---|---|
| | 8. ಪರಿಶಿಷ್ಟ ಜಾತಿ: ಪಂಗಡ ಬಡಾವಣೆಗಳಲ್ಲಿ ಗಟಾರ ಒಳಚರಂಡಿ ಕೆಲಸ | 1,53,922 |
| | 9. ಡಾ: ಅಂಬೇಡ್ಕರ್ ವೃತ್ತಕ್ಕೆ ಕಾರಂಜಿ ಕೆಲಸ | 62,437 |
| | 10. ಪೌರಕಾರ್ಮಿಕರ ವಸತಿಗೃಹ ರಿಪೇರಿ | 59,176 |
| | **ಒಟ್ಟು ರೂ.** | **12,89,379** |

1994-95ನೇ ಸಾಲಿಗಾಗಿ ಒಟ್ಟು 22.00 ಲಕ್ಷ ಕಾಯ್ದಿರಿಸಲಾಗಿತ್ತು. ಆ ಪೈಕಿ ಬಾಕಿ ಉಳಿದ ರೂ. 10.00 ಲಕ್ಷವನ್ನು 1995-96ನೇ ಸಾಲಿನಲ್ಲಿ ಅಳವಡಿಸಿಕೊಂಡು 1995-96ನೇ ಸಾಲಿಗೆ ಶೇ.100ರಷ್ಟು ಪ್ರಗತಿ ಸಾಧಿಸಿದೆ.

| | | |
|---|---|---|
| 1995-96 | 1. ಡಾ: ಅಂಬೇಡ್ಕರ್ ಭವನ ನಿರ್ಮಾಣ | 10,00,000 |
| | 2. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪ ನಿರ್ವಹಣೆ | 3,25,220 |
| | 3. ಬಾಲವಾಡಿಗಳ ನಿರ್ವಹಣೆ | 1,97,345 |
| | 4. ಪರಿಶಿಷ್ಟಜಾತಿ:ಪಂಗಡಗಳ ನಿರುದ್ಯೋಗಿ ಪದವೀಧರರಿಗಾಗಿ ಕಂಪ್ಯೂಟರ್ ಖರೀದಿ ಹಾಗೂ ತರಬೇತಿ | 50,000 |
| | 5. ಪರಿಶಿಷ್ಟ ಜಾತಿ: ಪಂಗಡಗಳ ಜನರಿಗೆ ಮನೆಗಳ ನಿರ್ಮಾಣ ಹಾಗೂ ಜಮೀನು ಖರೀದಿ | 12,30,504 |
| | 6. ಪರಿಶಿಷ್ಟ ಜಾತಿ:ಪಂಗಡಗಳ ಬಡಾವಣೆಗಳಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ನಿರ್ಮಾಣ | 29,882 |
| | 7. ಪರಿಶಿಷ್ಟ ಜಾತಿ: ಪಂಗಡಗಳ ಬಡಾವಣೆಗಳಲ್ಲಿ ಈಗಾಗಲೇ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಬಿಲ್ಲುಗಳ ಮರುಹೊಂದಾಣಿಕೆ | 3,72,243 |
| | **ಒಟ್ಟು ರೂ.** | **32,05,194** |

ಕಾಯ್ದಿರಿಸಿದ ಹಣ ಹಾಗೂ ವಿನಿಯೋಗಿಸಿದ ಹಣ ಶೇ. 100ರಷ್ಟು ಪ್ರಗತಿ ಸಾಧಿಸಿದೆ.

| | | |
|---|---|---|
| 1996-97 | 1. ತೀವ್ರವಾದ ಖಾಯಿಲೆ ಹೊಂದಿದ ಪರಿಶಿಷ್ಟ ಜಾತಿ: ಪಂಗಡಗಳ ರೋಗಿಗಳಿಗೆ ಚಿಕಿತ್ಸೆಗಾಗಿ ಧನ ಸಹಾಯ | 10,000 |

| 1 | 2 | 3 |
|---|---|---|
| | 2. ವಿದ್ಯಾವಂತ ನಿರುದ್ಯೋಗಿಗಳಿಗಾಗಿ ಕಂಪ್ಯೂಟರ್ ತರಬೇತಿಗಾಗಿ ಕಂಪ್ಯೂಟರ್ ಖರೀದಿ | 61,232 |
| | 3. ಡಾ: ಅಂಬೇಡ್ಕರ್ ಜಯಂತಿ ಉತ್ಸವ ಆಚರಣೆ | 7,995 |
| | 4. ಪರಿಶಿಷ್ಟ ಜಾತಿ: ಪಂಗಡಗಳ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿ | 5,74,125 |
| | 5. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪ ನಿವೇಶನ ಬಾಬತ್ತು ಮರು ಹೊಂದಾಣಿಕೆ ಹಾಗೂ ಬಾಕಿ ಉಳಿದ ಬಿಲ್ಲುಗಳನ್ನು ಪಾವತಿಸುವುದು | 7,03,760 |
| | 6. ಸಮಾಜ ಮಂದಿರಗಳ ನಿರ್ಮಾಣ | 1,14,725 |
| | 7. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪ ಕೆಲಸ | 4,91,153 |
| | 8. ನವೋದಯ ಹಾಗೂ ಸೈನಿಕ ಶಾಲೆಗಳ ಪ್ರವೇಶಕ್ಕಾಗಿ ತರಬೇತಿ ಪಡೆಯುವ ಪರಿಶಿಷ್ಟ ಜಾತಿ: ಪಂಗಡಗಳ ವಿದ್ಯಾರ್ಥಿಗಳಿಗೆ ತರಬೇತಿ ವೆಚ್ಚ | 25,000 |
| | 9. ಅತೀವೃಷ್ಟಿಯಿಂದ ಹಾನಿಗೊಳಗಾದ ಪರಿಶಿಷ್ಟ ಜಾತಿ: ಪಂಗಡಗಳ ಜನರಿಗೆ ಆರ್ಥಿಕ ಸಹಾಯ | 6,000 |
| | ಒಟ್ಟು ರೂ. | **19,93,990** |

ಕಾಯ್ದಿರಿಸಿದ ಹಣ ಹಾಗೂ ವಿನಿಯೋಗಿಸಿದ ಹಣ ಶೇ. 100ರಷ್ಟು ಪ್ರಗತಿ ಸಾಧಿಸಿದೆ.

## ವಿಜಾಪುರ ಹಾಗೂ ಬಾಗಲಕೋಟೆ ನೂಲಿನ ಗಿರಣಿ ಪುನರಾರಂಭಿಸುವುದು

1935 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಜಾಪುರ ಹಾಗೂ ಬಾಗಲಕೋಟೆ ನೂಲಿನ ಗಿರಣಿಗಳನ್ನು ಪುನರಾರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು?*

*ಆ) ಪುನರಾರಂಭ ಮಾಡುವ ಉದ್ದೇಶವಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು, ಪುನರಾರಂಭಕ್ಕೆ ಮುಂದೆ ಆಧುನೀಕರಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

*ಇ) ಹಾಲಿ ಇರುವ ತಂತ್ರಜ್ಞಾನ ಇಂದಿನ ದಿನದಲ್ಲಿ ಹೊಸ ತಂತ್ರಜ್ಞಾನ ಅವಶ್ಯಕತೆಗನುಗುಣವಾಗಿ ಬದಲಾಯಿಸಲಾಗುವುದೆ?*